ಅ) ಆ ಅಧಿಕಾರಿಯನ್ನು ಅಕಾಡೆಮಿಗೆ ಖಾಯಂ ಆಗಿ ನಿಯೋಜಿಸಲಾಗಿದೆಯೇ

ಇ) ಹಾಗಿಲ್ಲದಿದ್ದರೆ ಖಾಯಂ ಆಗಿ ನಿಯೋಜಿಸದಿರಲು ಕಾರಣಗಳೇನು?

ಈ) ಖಾಯಂ ಆಗಿ ಪೂರ್ಣ ಪ್ರಮಾಣದ ಒಬ್ಬ ಅಧಿಕಾರಿಯನ್ನು ಆಡಳಿತ ನಿರ್ವಹಿಸಲು ಏಕೆ ನಿಯೋಜಿಸಬಾರದು.

ಉ) ನಿಯೋಜಿಸಲು ಅಧಿಕಾರಿಗಳ ಕೊರತೆ ಇದ್ದಲ್ಲಿ ಇನ್ನೊಂದು ಇಲಾಖೆಯಿಂದ ನಿಯೋಜನೆ ಮೇರೆಗೆ ಏಕೆ ಪಡೆಯಬಾರದು.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):

ಅ) ಅಕಾಡೆಮಿಯ ಕೆಲಸವನ್ನು ನಿರ್ವಹಿಸಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಯೊಬ್ಬರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿದೆ.

ಆ) ಇ) ಈ) ಮತ್ತು ಉ) ಅಕಾಡೆಮಿಯ ಆಡಳಿತ ಮಂಡಳಿಯು ಅಕಾಡೆಮಿಯ ಚಟುವಟಿಕೆಗಳಿಗೆ ಬೇಕಾದ ನಿರ್ದೇಶಕರ ಹುದ್ದೆ ಮತ್ತು ಸಿಬ್ಬಂದಿ ವರ್ಗವನ್ನು ಈಗಾಗಲೇ ಪರಿಶೀಲಿಸುತ್ತಿದೆ. ಅಕಾಡೆಮಿಯಲ್ಲಿ ಒಬ್ಬ ನಿರ್ದೇಶಕರು ಇರುತ್ತಾರೆಂದು ಸರ್ಕಾರಿ ಆದೇಶದಲ್ಲಿ ಷರತ್ತನ್ನು ವಿವರಿಸಿದೆ. ನಿರ್ದೇಶಕರು ಹುದ್ದೆ ಬೇರೆಯಾಗಿ ಸೃಜಿಸುವವರೆಗೆ ಖಾಯಂ ಆಗಿ ನಿಯೋಜಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್ ನಗರದಲ್ಲಿ ಆಗಿರುವ ಹಲ್ಲೆ ಮತ್ತು ಕೊಲೆ ಪ್ರಕರಣ

351-ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 2-1-94ರಂದು ಬೀದರ್ ನಗರದಲ್ಲಿ ಹಲ್ಲೆ ಹಾಗೂ ಕೊಲೆ ಪ್ರಕರಣಗಳು ನಡೆದಿವೆಯೇ?

ಆ) ಹಾಗಿದ್ದಲ್ಲಿ ಒಬ್ಬ ಪೊಲೀಸ್ ಪೇದೆಯನ್ನು ದರೋಡೆಕೋರರು ಕೊಲೆ ಮಾಡಿರುವುದು ನಿಜವೇ?

ಇ) ಅದೇ ದಿವಸ ಶ್ರೀ ಉಮಾಕಾಂತ್ ನಾಗಾರ್ಜುನ್ ಎಂಬುವವರ ಮೇಲೂ ಸಹ ಹಲ್ಲೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮೃತಪಟ್ಟ ಪೊಲೀಸ್ ಪೇದೆಯವರ ಮನೆಯವರಿಗೆ ಸರ್ಕಾರ ನೀಡಿರುವ ಪರಿಹಾರ ಹಣವೆಷ್ಟು?

ಉ) ಶ್ರೀ ಉಮಾಕಾಂತ್‌ರವರ ವೈದ್ಯಕೀಯ ವೆಚ್ಚವನ್ನು ಸರ್ಕಾರ ಭರಿಸುತ್ತದೆಯೇ?

ಊ) ಆ ಪ್ರಕರಣಕ್ಕೆ ಕಾರಣರಾದವರನ್ನು ಕಂಡುಹಿಡಿಯಲಾಗಿದೆಯೇ?

ಋ) ಮೃತಪಟ್ಟ ಪೊಲೀಸರ ಪತ್ನಿಗೆ ಸರ್ಕಾರ ಅನುಕಂಪದ ಆಧಾರದ ಮೇಲೆ ನೌಕರಿ ನೀಡುತ್ತಿದೆಯೇ?

ೠ) ಬೀದರ್ ನಗರದಲ್ಲಿ ಹಲ್ಲೆ ಹಾಗೂ ಕೊಲೆ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು ಇಂಥ ಒಂದು ಪ್ರಕರಣ ನಡೆದಿದೆ.

ಆ) ದಿನಾಂಕ : 2: 3-1-94ರಂದು ರಾತ್ರಿ ಪೊಲೀಸ್ ಪೇದೆಗಳಾದ ಶ್ರೀ ಚಂದ್ರಕಾಂತ್ (ಪಿಸಿ 459) ಮತ್ತು ಶ್ರೀ ಯೇಸುದಾಸ್ (ಪಿಸಿ 1043) ರಾತ್ರಿ ಗಸ್ತು ಮಾಡುತ್ತಿದ್ದಾಗ ಇಬ್ಬರು ಅಪರಿಚಿತ ವ್ಯಕ್ತಿಗಳು ಶ್ರೀ ಚಂದ್ರಕಾಂತ್‌ರನ್ನು ತಿವಿದು ಪರಾರಿಯಾಗಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಸದರೀ ಪೇದೆಯು ಮೃತಪಟ್ಟಿದ್ದಾರೆ. ಈ ಕೃತ್ಯವು ಕಳ್ಳರಿಂದ ನಡೆದಿರಬಹುದೆಂದು ಶಂಕಿಸಲಾಗಿದೆ.

ಇ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಈ) ಸರ್ಕಾರದಿಂದ ಮೃತನ ಮನೆಯವರಿಗೆ ಒಟ್ಟು ರೂ. 29,404-00 ಕೊಡಲಾಗಿದೆ. ಅಲ್ಲದೆ ಯುನೈಟೆಡ್ ಇನ್ಷ್ಯೂರೆನ್ಸ್ ಕಂಪನಿಗೆ 1 ಲಕ್ಷ ರೂ.ಗಳ ಮಂಜೂರಾತಿಗಾಗಿ ಪತ್ರ ವ್ಯವಹಾರ ನಡೆಸಲಾಗಿದೆ ಹಾಗೂ ಮೃತರ ಕುಟುಂಬದವರಿಗೆ ವಿಶೇಷ ಎಕ್ಸ್ಗೆಷಿಯಾ ಹಣವನ್ನು ನೀಡುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ಉ) ಇಲ್ಲ.

ಊ) ಈ ಪ್ರಕರಣವನ್ನು ಈಗಾಗಲೇ ಸಿ.ಓ.ಡಿ. ವಿಭಾಗಕ್ಕೆ ವಹಿಸಿದ್ದು, ತನಿಖಾ ಕಾರ್ಯ ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚುವ ಕಾರ್ಯ ಭರದಿಂದ ನಡೆಯುತ್ತಿದೆ.

ಋ) ನಿಯಮಾನುಸಾರ ಅನುಕಂಪದ ಆಧಾರದ ಮೇಲೆ ಮೃತನ ಪತ್ನಿಗೆ ಸರ್ಕಾರಿ ನೌಕರಿ ಕೊಡುವ ಬಗ್ಗೆ ಪರಿಶೀಲಿಸಲಾಗುವುದು.

ೠ) ಬೀದರ್ ಪಟ್ಟಣದಲ್ಲಿ ಮುಖ್ಯ ಪೇದೆ ಹಾಗೂ ಪೇದಗಳನ್ನೊಳಗೊಂಡಂತೆ ರಾತ್ರಿ ಗಸ್ತನ್ನು ನಿಯೋಜಿಸಲಾಗಿದ್ದು ಇಂತಹ ಘಟನೆಗಳು ನಡೆಯದ ಹಾಗೆ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. ಇದೇ ರೀತಿಯಾಗಿ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಿಗೆ ಸೂಕ್ತ ರೀತಿಯ ತಿಳುವಳಿಕೆ ನೀಡಲಾಗಿದೆ. ಬೀದರ್ ಪಟ್ಟಣವನ್ನು 3 ಭಾಗಗಳನ್ನಾಗಿ ಮಾಡಿ ಪೊಲೀಸ್ ಉಪ ನಿರೀಕ್ಷಕರ ನೇತೃತ್ವದಲ್ಲಿ ಇಡೀ ರಾತ್ರಿ ನಗರದಲ್ಲಿ ಸಂಚರಿಸಿ, ಇಂತಹ ಪ್ರಕರಣಗಳು ನಡೆಯದ ಹಾಗೆ ನೋಡಿಕೊಳ್ಳಲು ನಿಯೋಜಿಸಲಾಗಿದೆ.

ರಾತ್ರಿಯ ವೇಳೆ ಈಗಾಗಲೇ ನಿಯೋಜಿಸಿರುವ ಪಡೆಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುತ್ತವೆಯೇ ಎಂಬುದನ್ನು ಪರೀಕ್ಷಿಸಲು ಉಪ ಆರಕ್ಷಕಾಧೀಕ್ಷಕರ ನೇತೃತ್ವದಲ್ಲಿ ಪಡೆಯನ್ನು ನಿಯೋಜಿಸಲಾಗಿದೆ.

ಬಸವಕಲ್ಯಾಣವನ್ನು ಪ್ರವಾಸಿಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದರ ಬಗ್ಗೆ

352 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಸರ್ಕಾರವು ಬಸವಕಲ್ಯಾಣದಲ್ಲಿ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಪಡಿಸಲುಕೈಗೊಂಡಿರುವ ಕಾರ್ಯಕ್ರಮಗಳೇನು?

ಆ) 1993-94ರಲ್ಲಿ ಬಸವಕಲ್ಯಾಣದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಇ) 1993-4ರಲ್ಲಿ ಕೇಂದ್ರ ಸರ್ಕಾರದಿಂದ ಪ್ರವಾಸಿಸ್ಥಳದ ಅಭಿವೃದ್ಧಿಗಾಗಿ ಮಂಜೂರಾದ ಹಣವೆಷ್ಟು?

ಈ) ಬಸವಕಲ್ಯಾಣದಲ್ಲಿ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ಒದಗಿಸಲು ಸಮಗ್ರ ಯೋಜನೆಯನ್ನು ಸರ್ಕಾರ ತಯಾರಿಸಿ ಕೇಂದ್ರಕ್ಕೆ ಕಳುಹಿಸಿದೆಯೆ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):

ಅ) ಭಾರತ ಸರ್ಕಾರ 1993-94ನೇ ಸಾಲಿನಲ್ಲಿ ಬಸವಕಲ್ಯಾಣದ ಈ ಕೆಳಕಂಡ ಯೋಜನೆಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸಿದೆ.